**ಲೇಖಕ ಎಂ.ಎನ್. ವ್ಯಾಸರಾವ್ ಇತ್ತೀಚೆಗೆ (ಜುಲೈ 15, 2018) ನಿಧನರಾದರು. ಕೆಲ ಜನಪ್ರಿಯ ಗೀತೆಗಳನ್ನು, ಕವಿತೆಗಳನ್ನು ಬರೆದಿರುವ ಅವರ ವ್ಯಕ್ತಿತ್ವದ ಚಿತ್ರಣ ಇಲ್ಲಿದೆ...**

**1970** ಕನ್ನಡ ಸಾಹಿತ್ಯ, ಸಿನಿಮಾ ರಂಗ ಮತ್ತು ಸಾಂಸ್ಕೃತಿಕ ಸಂಘಟನೆಗಳಲ್ಲಿ ಚಲನಶೀಲತೆ ಉಂಟು ಮಾಡಿದ ಕಾಲ. ಸಾಹಿತ್ಯದಲ್ಲಿ ನವೋದಯ, ನವ್ಯ, ಬಂಡಾಯ, ಸಿನಿಮಾ ರಂಗದಲ್ಲಿ ಪರ್ಯಾಯ ಸಿನಿಮಾ ಯುಗ ಶುರುವಾಗಿತ್ತು. ಈ ಅವಧಿಯಲ್ಲೇ ಕನ್ನಡದ ಒಂದಿಷ್ಟು ಕವಿ ಹೃದಯಗಳು, ಸಮಾನ ಮನಸ್ಕರು ಒಂದೆಡೆ ಸೇರಿದರು.

1969–70ರಲ್ಲಿ ಬೆಂಗಳೂರು ನಗರ ರಂಗ ಕಲಾವಿದರೆಲ್ಲಾ ಒಟ್ಟಾಗಿ ಕೆಲಸ ಮಾಡುತ್ತಿದ್ದೆವು. ಆಗಿನ್ನೂ ಇಷ್ಟೊಂದು ತಂಡಗಳು ಇರಲಿಲ್ಲ. 70ರ ನಂತರ ಬೆನಕ, ರಂಗಸಂಪದ, ನಟರಂಗ, ಸಮುದಾಯಗಳು ಒಂದೊಂದಾಗಿ ಶುರುವಾದವು. ಆ ದಿನಗಳಲ್ಲಿ ನಾನು ರಂಗದ ಮೇಲಷ್ಟೇ ಅಲ್ಲ ನೇಪಥ್ಯದಲ್ಲೂ ತೊಡಗಿಕೊಂಡಿದ್ದೆ. ಆ ಸಮಯದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್, ಯುಕೋ ಬ್ಯಾಂಕ್, ಬೆಮೆಲ್, ಮೈಸೂರು ಬ್ಯಾಂಕ್, ಎಲ್ಐಸಿ ಅನೇಕ ಕಡೆಗಳಲ್ಲಿ ರಂಗಪ್ರಿಯರಿದ್ದರು. ಅಂಥವರನ್ನೆಲ್ಲಾ ನಾವು ಗೆಳೆಯರು ಗುರುತಿಟ್ಟುಕೊಂಡಿದ್ದೆವು. ಎಷ್ಟೋ ಬಾರಿ ನಮ್ಮ ಮಧ್ಯಾಹ್ನದ ಊಟದ ಸಮಯವನ್ನು ಇವರ ಜತೆ ಕಳೆಯುವಂತೆ ನೋಡಿಕೊಳ್ಳುತ್ತಿದ್ದೆವು. ಯಾಕೆಂದರೆ ಆಗ ನಮ್ಮ ಹತ್ತಿರ ದುಡ್ಡು ಇರುತ್ತಿರಲಿಲ್ಲ. ಅಂಥ ಮಧ್ಯಾಹ್ನಗಳಲ್ಲಿ ಕೆಂಪೇಗೌಡ ರಸ್ತೆಯ ಯುಕೋ ಬ್ಯಾಂಕ್ ಹತ್ತಿರ ಹೋದರೆ ಚಡ್ಡಿ ನಾಗೇಶ್, ಎಲ್ಐಸಿಗೆ ಹೋದರೆ ವಿ.ಎಸ್. ಮೂರ್ತಿ, ಮೈಸೂರು ಬ್ಯಾಂಕ್‌ಗೆ ಹೋದರೆ ರಂಗಸ್ವಾಮಿ, ಬೆಮೆಲ್‌ಗೆ ಹೋದರೆ ಬಸವರಾಜು ಸಿಗುತ್ತಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ ಎಂ.ಜಿ. ರಸ್ತೆಯ ಯುಕೋ ಬ್ಯಾಂಕ್‌ಗೆ ಹೋದರೆ ಅಲ್ಲಿ ವ್ಯಾಸರಾವ್ ಸಿಗುತ್ತಿದ್ದರು. ಹೀಗೆ ನಮ್ಮ ಮಧ್ಯಾಹ್ನದ ಊಟವನ್ನು ರಂಗಕರ್ಮಿಗಳಿಗೆ ಮೀಸಲಿಟ್ಟಿದ್ದೆವು! ಅವರೆಲ್ಲಾ ಕೆಲಸ ಮಾಡುತ್ತಿದ್ದರು. ನಾವು ನಿರುದ್ಯೋಗಿಗಳು.

ಅದರಲ್ಲೂ ನಾವು ಸರಿಯಾಗಿ ಮಧ್ಯಾಹ್ನ 12ರ ಹೊತ್ತಿಗೆ ಹೋಗುತ್ತಿದ್ದೆವು. ಅಲ್ಲೇ ಇದ್ದ 'ಪ್ರಜಾವಾಣಿ' ಕಚೇರಿಗೆ ನಮ್ಮ ಸಾಂಸ್ಕೃತಿಕ